# ನಗರಾಭಿವೃದ್ಧಿ ಇಲಾಖೆ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರು ನಿಯಮ 72 ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಉತ್ತರ.**

---

**ವಿಷಯ:**

ಪ್ರಸ್ತುತ ಸಾಲಿನ ಆಸ್ತಿ ತೆರಿಗೆ ಜನವಿರೋಧಿ ಕಾರಣ ಖಾಲಿ ನಿವೇಶನಕ್ಕೆ ಈಗಿನ (ಪ್ರಸ್ತುತ) ಎಸ್.ಆರ್. ದರದಲ್ಲಿ ತೆರಿಗೆ ವಿಚಾರದ ಕುರಿತು ನಿಯಮ-72ರಡಿ ಮಂಡಿಸಿರುವ ಸೂಚನಾ ಪತ್ರ.

**ಉತ್ತರ:**

2021-22ನೇ ಸಾಲಿನಲ್ಲಿ ಮುನಿಸಿಪಲ್ ಕಾಯ್ದೆಗಳಿಗೆ ತಿದ್ದುಪಡಿ ತರಲಾಗಿದ್ದು, ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳ ಶೇ.25ನ್ನು ಪರಿಗಣಿಸಿಕೊಂಡು ಆಸ್ತಿ ತೆರಿಗೆ ನಿರ್ಧರಣೆ ಮಾಡಬೇಕಾಗಿರುತ್ತದೆ ಹಾಗೂ ವಿವಿಧ ವರ್ಗಗಳ ಆಸ್ತಿಗಳಿಗೆ (ವಸತಿ/ವಾಣಿಜ್ಯ/ಕೈಗಾರಿಕೆ/ಖಾಲಿ ನಿವೇಶನ) ಕನಿಷ್ಠ ಹಾಗೂ ಗರಿಷ್ಠ ದರಗಳನ್ನು ಕಾಯ್ದೆಗಳಲ್ಲಿ ನಿಗದಿಪಡಿಸಿದ್ದು, ಖಾಲಿ ನಿವೇಶನಗಳಿಗೆ ಸ್ವತ್ತಿನ ಮೌಲ್ಯದ ಶೇ.02 ಕ್ಕಿಂತ ಕಡಿಮೆಯಿಲ್ಲದಂತೆ ಹಾಗೂ ಶೇ.0.5 ಕ್ಕಿಂತ ಹೆಚ್ಚಿಗೆಯಾಗದಂತೆ ತೆರಿಗೆ ನಿರ್ಧರಣೆ ಮಾಡಬೇಕಾಗಿರುತ್ತದೆ. ಕಾಯ್ದೆಗಳಲ್ಲಿನ ಅವಕಾಶದಂತೆ ನಗರ ಸ್ಥಳೀಯ ಸಂಸ್ಥೆಯ ಕೌನ್ಸಿಲ್‌ನ ಅನುಮೋದನೆ ಪಡೆದುಕೊಂಡು ಖಾಲಿ ನಿವೇಶನಗಳಿಗೆ ತೆರಿಗೆ ಸಂಗ್ರಹ ಮಾಡಲಾಗುತ್ತಿದೆ.

---

ಸಂಖ್ಯೆ:ನಅಇ 36 ಎಂಎನ್‌ಇ 2023(ಇ).

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು